Regd No B G 155. Sri (95)2 22—5—1965

# ಸತ್ಯವಾದಿ

43th Year
Satyavadi
DAILY
MYSORE 4

ಸಂಪಾದಕರು — ಶ್ರೀನಿವಾಸಶ್ರೀಧರ್ ಎಂ ವಿ ಮತ್ತು ಶ್ರೀ ಮತಿ ಪದ್ಮಾವತಿ ಮೂರ್ತಿ ಸಹಾಯಕರು — ಧರ್ಮಪ್ರಚಾರಮಾಲಿಕ ಎಂ ಎಸ್ ಕೃಷ್ಣಾಚಾರ್

ವಾರ್ತಾ ವಿಶೇಷಗಳು ನೆಹರೂ ಸ್ಮಾರಕ ಸಪ್ತಾಹ ವೈಶಾಖ — ತಾ || 21 ರಿಂದ 27

## ಮಧ್ಯ ಪ್ರದೇಶದ ಖೈದಿಗಳ ಶ್ರಮದಿಂದ ನೂತನ ಕಾರ್ಯ

ಮಧ್ಯಪ್ರದೇಶದ ಬಿಲಾಸಪುರದ ಕೇಂದ್ರ ಜೈಲಿನ ಖೈದಿಗಳು ಶ್ರಮದಾನದಿಂದ ಜೈಲು ಅಧಿಕಾರಿಗಳಿಗಾಗಿ ಜೈಲಿನಲ್ಲಿ 24 ಮನೆಗಳನ್ನು ಕಟ್ಟಿರುವರು ; ಇವಕ್ಕೆ 8000 ರೂಗಳು ಮಾತ್ರ ಖರ್ಚಾಗಿದೆ ; ಬೇರೆ ರೀತಿ ಕಟ್ಟಿಸಿದ್ದರೆ ಇದರ ಮೂರರಷ್ಟಾಗುತ್ತಿತ್ತೆಂದು ಹೇಳಲಾಗಿದೆ.

★

ಕಾಂಗ್ರೆಸ್ — ಭಾರತ ಪ್ರಧಾನಿ ಶಾಸ್ತ್ರಿಗಳು ತಮ್ಮ ಔತಣ ಭಾಷಣದ ಸಮಯದ ಅಭಿವೃದ್ಧಿ ಸ್ಥಿತಿಯನ್ನು ಕೊಂಡಾಡಿ ಭಾಂತಕ್ಕೆ ಅದೊಂದು ಉಪಾಷ್ಠಾಣೆ ಎಂದು ಬುಧವಾರ ಹೇಳಿದರು

★

ವಿಶ್ವಸಂಸ್ಥೆ — ಚೀನಾವನ್ನು ಬಿಟ್ಟು ನಿಸ್ಶಸ್ತ್ರೀಕರಣದ ಮಾತು ಅಪ್ರಯೋಜಕವೆಂದು ಹೇಳಲಾಗುತ್ತಿದೆ.

---

ಪ್ರಕಂಸಿಸಿ ಅನೇಕ ಕಾಗದಗಳು ಬಂದಿತ್ತು, ಮೆಯಂತೆ : ಇವಳಿಗೆ ಸ್ವಧಾನಿಗಳ ಪಾಠ ಠಿತೋಷಕ್ಕಾಗಿ ಶಿಫಾರಸು ಮಾಡಲಾಗವುದೆಂದು ಹೇಳಲಾಗಿದೆ.

★

## ಅಬಾ ! ಅದೆಂತೆಂತಹವರಿದಾರೆ ?

ಜೆಲ್ಹಾಂಗಿನಲ್ಲಿರುವ ಪಾಕಿಸ್ತಾನಿ ರಾಯಭಾರಿ ಕಾರ್ಯಾಲಯವನ್ನು ಮುಚ್ಚಬೇಕೆಂದು ಭಾರತ ಸರಕಾರ ಆಜ್ಞೆ ಇತ್ತಿರುತ್ತದೆ ; ಅಂದರೆ ಪಾಕಿಸ್ತಾನಿಗಳ ಕಿರುಕುಳ ಜಾಸ್ತಿಯಾಗುತ್ತಿದ್ದು ಇಲ್ಲಿರುವ ಕಾರ್ಯಾಲಯಗಳನ್ನವರು ಕಾರಾಭಾರಿಗಾಗಿ ಹಾಗೂ ಶ್ರೀನಿವಾಸಕ್ಕಾಗಿ ಉಪಯೋಗಿಸುತ್ತಿದ್ದಾರೆಂಬುದನ್ನು ಭಾರತ ಸರಕಾರ ಒಪ್ಪಿಕೊಂಡಂತಾಯಿತು ; ಭಾರತೀಯ ಜನಸಂಘದವರು ಈ ಕುರಿತು ಬಹಳ ಹಿಂದೆಯೇ ಎಚ್ಚರಿಕೆ ನೀಡಿದ್ದರೂ, ನಾವು ಮುಯ್ಯಿಗೆ ಮುಯ್ಯಿ ತೀರಿಸಿಕೊಳ್ಳಲು ಒಪ್ಪುವುದಿಲ್ಲವೆಂದು ಹೇಳುತ್ತಿದ್ದ ಕಾಂಗ್ರೆಸು ಮಂತ್ರಿಮಂಡಲ ಈಗಲಾದರೂ ಒಪ್ಪಿರುವುದು ಭಾರತೀಯ ಜನಸಂಘದ ತಾತ್ವಿಕ ವಿಜಯವೆಂದೇಳಬಹುದಾಗಿದೆ. ಭಾರತೀಯರಂಗ ಧೈರ್ಯವೀಯುವ ವಿಷಯವಿದೆ ; ಆದರೆ ಕಾಂಗ್ರೆಸ್ಸು ಮಂತ್ರಿಮಾಗಧರು ಮೂಗಿನಡಿಯಲ್ಲೇ ಏನು ನಡೆಯುತ್ತಿದೆ.

4-5-65
No issue

---

ನವದೆಹಲಿ — ಪಾಕಿಸ್ತಾನ ಸ್ಟೂಡೆಂಟ್ಸ್ ಚೈತನ್ಯ ಎಂಬ ನಿಯತ ಕಾಲಿಕೆಯು ಮಾರ್ಚಿ 15 ರಿಂದ ಇಂದಿನವರೆಗಿನ ಸಂಚಿಕೆಗಳು ಪೂರ್ವಾಗ್ರಹಪೀಡಿತ ವಿಷಯುಗಳನ್ನೊ ಒಳಗೊಂಡಿವೆ ಎಂಬ ಕಾರಣದ ಮೇಲೆ ಭಾರತ ಸರ್ಕಾರವು 1962 ರ ಭಾರತ ರಕ್ಷಣಾ ನಿಯಮಗಳ ಪ್ರಕಾರ ಆ ಸಂಚಿಕೆಗಳ ಮೇಲೆ ಮುಟ್ಟುಗೋಲು ಹಾಕಿದ್ದಾರೆ.

ನವದೆಹಲಿ — ಪೂರ್ವ ಪಾಕಿಸ್ತಾನದಲ್ಲಿ ಪ್ರಕೃತಿಯು ವಿಕೋಪಕ್ಕೆ ತುತ್ತಾಗಿ ಭಾರಿ ನಷ್ಟವು ನೋವುಗಳು ಉಂಟಾಗಿ ಅಪಾರ ಆಸ್ತಿ ನಾಶವಾದ ಬಗ್ಗೆ ಭಾರತದ ಜನತೆ ಮತ್ತು ಸರಕಾರದ ವತಿಯಿಂದ ಲೋಕಸಭೆ ಸದಸ್ಯ ಶ್ರೀ ರಾಧಾಕೃಷ್ಣನ್ನರು ಪಾಕಿಸ್ತಾನದ ಅಧ್ಯಕ್ಷ ಫೀ || ಮಾ || ಮಹಮದ್ ಅಯೂಬ ಖಾನರಿಗೆ ಸಹಾನುಭೂತಿಪರ ಸಂದೇಶವೊಂದನ್ನು ಕಳುಹಿಸಿದ್ದಾರೆ.

ಗಯಾ — ಸ್ಥಳೀಯ ಹೋಟೆಲೊಂದರ ಮಾಲೀಕ ದೇವಾನಂದ ಶರ್ಮ, ಅವನ ಮಗ, ಸೇವಕ, ಅಡಿಗೆಯವನು ಇವರಿಗೆ ಅಡಿಷನಲ್ ಸೆಷನ್ಸ್ ಜಡ್ಜರು ಜೀವಾವಧಿ ಸಜೆ ನಿಧಿಸಿರುವರು : ಹೋಟೆಲಿನ ಧನವಂತ ಗಿರಾಕಿಗಳನ್ನು ಕೊಂದು ಶವಗಳನ್ನು ದೂರದ ಭಾವಿಗೆ ಹಾಕಿದ್ದರು ; ಈ ರೀತಿ ಹೋಟೆಲಿನಲ್ಲಿ ರಾತ್ರಿ ತಂಗಿದ ಧನವಂತ ಗಿರಾಕಿಗಳನ್ನು ಕೊಲೆಮಾಡುತ್ತಿದ್ದರೆಂಬ ಆಪಾದನೆ ಅವರ ಮೇಲಿದೆ.

★

ಪಾಳೆಯ ಪಂಚಾಂಗ

ದೈವಜ್ಞ ಶಿರೋಮಣಿ

ಅಷ್ಟಾವಧಾನ ವಿದ್ವಾನ್ ಧರ್ಮಾಧಿಕಾರಿ ರಾಜಕಾರ್ಯಾವಕ್ತ, ಜ್ಯೋತಿರ್ವಿದ್ಯಾಪ್ರವೀಣ ಪಂಚಕ್ಷೇತ್ರ ಕೃಷ್ಣಜೋಯಿಸರಿಂದ

2ನೆ ಭಾನುವಾರ ಅಷ್ಟಮಿ ಧನಿಷ್ಠ

ನವದೆಹಲಿ — ಪಾಕಿಸ್ತಾನದ ಸಂಸತ್ತಿನ ಕೆಳಮನೆಯ ಸದಸ್ಯರಿಗೆ ನಗರ ಕಾಂಗ್ರೆಸು ಸಮಿತಿ ಆಶ್ರಯದಲ್ಲಿ ದಿವಂಗತ ಪ್ರಧಾನಿ ಪಂ || ನೆಹರೂರವರ ಸ್ಮಾರಕ ಸಪ್ತಾಹವನ್ನು ಟೌನ್ ಹಾಲಿನಲ್ಲಿ ನಡೆಸಲಾಗುತ್ತಿದೆ : ದಿನವೂ ಬೇರೆಬೇರೆ ಕಾರ್ಯಕ್ರಮದ ಏರ್ಪಾಟಿದೆ.

★

ವಿಶ್ವಸಂಸ್ಥೆ — ಷೇಕ್ ಅಬುಲ್ಲ ಮುತ್ತು ವಿಜಾರ್ತ ಬೇಗ್‌ರನ್ನು ನಿರ್ಬಂಧಿಸಿರುವುದ ಜಮ್ಮು ಕಾಶ್ಮೀರ ಪರಿಸ್ಥಿತಿಯನ್ನು ತೀವ್ರಗೊಳಿಸಿದೆ ಎಂದು ಪಾಕಿಸ್ತಾನದ ಪ್ರತಿನಿಧಿಯು ರಕ್ಷಣಾ ಸಮಿತಿಗೆ ಬರೆದುಕೊಂಡಿರುವರು.

★

ನವದೆಹಲಿ — ಅಲಿಘಡ ವಿಶ್ವವಿದ್ಯಾನಿಲಯದ ಬಗ್ಗೆ ರಾಷ್ಟ್ರಾಧ್ಯಕ್ಷರು ಸಮಗ್ರೀವಾಜ್ಞೆ ಹೊರಡಿಸಿರುವರು

★

ವಿಶ್ವಸಂಸ್ಥೆ — ವಿಯಟ್ನಾಂಗೆ ಅಸ್ಪೃಶ್ಯ ಲಿಯೂ ಸೈನ್ಯಕಳುಹಿಸಲು ನಿರ್ಧರಿಸಿರುವುದನ್ನು ರಷ್ಯಾ ಪ್ರತಿಭಟನೆಯನ್ನು ಪ್ರಧಾನ ಕಾರ್ಯದರ್ಶಿ ಥಂಟ್‌ರಂಗೆ ಅರ್ಪಿಸಿದೆ

★

ಢಾಕಾ — ಪೂರ್ವ ಪಾಕಿಸ್ತಾನದ 150 ಸದಸ್ಯ ಶಾಸನಸಭೆಯಲ್ಲಿ ಅಡಳಿತ ಪಕ್ಷವಾದ ಮುಸ್ಲಿಂಲೀಗಿಗೆ ಸ್ಪಷ್ಟ ಬಹುಮತ ದೊರೆತಿರುವುದಿಲ್ಲ

★

ನವದೆಹಲಿ — ಸಿಂಧೂನದಿ ನೀರಿನ ಒಪ್ಪಂದವನ್ನು ಪಾಕಿಸ್ತಾನ ಉಲ್ಲಂಘಿಸಿದೆಯೆಂದು ಪ್ರಕಟವಾಗಿದೆ.

★

ಕರಾಚಿ — ಕಚ್‌ನ ರಾಣ್ ವ್ಯವಸ್ಥೆಗೆ ಭಾರತವು ತನ್ನ ಸಶಸ್ತ್ರ ಪಡೆಗಳನ್ನು ಇಂಡೋಪಾಕ್ ಗಡಿಯಿಂದ ವಾಪಸಾತಿಸಿದೆಯೆಂದು ಪಾಕಿಸ್ತಾನ ಸೂಚಿಸಿದೆ

★

ಇದೇ ತಿಂಗಳ ದಿನಾಂಕ ಎಂಟನೆಯದು ದಿಲ್ಲಿಯ ವಿಜ್ಞಾನಭವನದಲ್ಲಿ ಮೈದಳೆದ ಸಮ್ಮೇಳನ ಸಡೆಯಿತು ; ಸಮ್ಮೇಳನದ ಅಧ್ಯಕ್ಷತೆಯನ್ನು ದಿಲ್ಲಿ ಪ್ರದೇಶ ಕಾಂಗ್ರೆಸ್ಸಿನ ಕಾರ್ಯದರ್ಶಿಯೂ ವಿದ್ಯಾರ್ಥಿಯೂ ಆಗಿರುವ ನಹಿಸಿದ್ದರು ; ಸಮ್ಮೇಳನವನ್ನು ಶ್ರೀಮತಿ ಅರುಣಾ ಆಸಫಾಲಿ, ಶ್ರೀ ಶ್ಯಾಮ ಕಾರಂತ್ ಪಾರ್ಕ್, ಸುಭದ್ರಾ ಜೋಷಿ, ಶಾಂತಿ ವಾಸುದೇವ್, ಮತ್ತು ಶ್ರೀ ಚೌಧರಿ ಬ್ರಹ್ಮಪ್ರಕಾಶ್ ( ಎಂ ಪಿ ), ಶ್ರೀ ಗುಂದಾರಾಲ್ ( ಶಾಂತಿ ಸಮಿತಿ ) ಪ್ರೇಮಸಾಗರ್ ಗುಪ್ತ ( ಕಮ್ಯೂನಿಸ್ಟ್ ಖಾದೀನ ) ಮುಂತಾದ ದೊಡ್ಡ ಜನರು ಭಾಗವಹಿಸಿದ್ದರಲ್ಲದೆ, ಪಾಕಿಸ್ತಾನದ ಡೆಪ್ಯುಟಿ ಹೈ ಕಮಿಷನರ್ ಶ್ರೀ ಅಬ್ದುಲ್ ಇಸ್ಮಾಯಿಲ್ ಮತ್ತು ಪ್ರೆಸ್ ಅಟ್ಯಾಚಿ ಶ್ರೀ ಅನ್ಸಾರಿ ಭಾಗವಹಿಸಿದ್ದರು ; ಅಂದರೆ ಪಾಕಿಸ್ತಾನದ ಕಡೆಯ ತೈನಿ ಜೇಶಾಗಳ ಅಪೂರ್ವ ಸಮ್ಮೇಳನ !

ಭಾರತೀಯ ಜನಸಂಘದ ಧುರೀಣ ಶ್ರೀ ಆಟಲ ಬಿಹಾರಿ ವಾಜಪೇಯಿ ಯವರು ಈ ಸಮ್ಮೇಳನವನ್ನು ಕುರಿತು ರಾಜ್ಯಸಭೆಯಲ್ಲಿ ಮಾತನಾಡಿದ್ದರು : ಒಡನೆ ಕಾಂಗ್ರೆಸ್, ಕಮ್ಯೂನಿಸ್ಟ್ ಮತ್ತು ಮುಸ್ಲಿಂ ಲೀಗಿನ ಸದಸ್ಯರು ಅವನ್ನು ಎದುರಿಸಿದರು : ಅಸಂಬದ್ಧ ಭಾಷಣ ಸಮ್ಮೇಳನವಾಗಿದ್ದುದರಿಂದ ಪ್ರತಿಕ್ರಿಯೆಯೂ ಏನೂ ಇಲ್ಲವೆಂಬಷ್ಟು ಶ್ರೀಮತಿ ಶ್ಯಾಮಕಾರಂತ್ ಮಾತನಾಡಿದ.

ಅಲ್ಲಿ ಕೇವಲ ಉರ್ದು ಹಾಡುಗಳನ್ನು ಮಾತ್ರ ಹಾಡಲಾಯಿತೇನು ? ಸಮ್ಮೇಳನವು ಪಾಕಿಸ್ತಾನದ ಪ್ರಚಾರ ಸಾಧನವಾಗಬಾರದೆಂದು ತಮ್ಮ ಭಾಷಣದಲ್ಲಿ ಅಭಿಪ್ರಾಯಪಟ್ಟಿದ್ದಕ್ಕಾಗಿ ಶ್ರೀ ರಮಾನಂದನ್ನು ಒಡನೆ ಕೂತ್ ಕೊಳ್ಳಿಸಿಬಿಟ್ಟರು : ಪಾಕಿಸ್ತಾನ ನಡೆಸುವ ಆಕ್ರಮಣವನ್ನು ಖಂಡಿಸುವ ತೀರ್ಮಾನ ಬಂದಾಗ ಭಾರಿ ವಾಗ್ಯುದ್ಧವೇ ನಡೆಯಿತು ; ಅಲ್ಲದೆ ಪಾಕಿಸ್ತಾನದ ಡೆಪ್ಯುಟಿ ಹೈ ಕಮಿಷನರ್ ತಾನೇ ಸಮ್ಮೇಳನದ ಸಂಚಾಲಕನೆಂಬಂತೆ ಓಡಿಯಾಡುತ್ತಿದ್ದರು, ಹಾಗಿದ್ದರೂ ಉರ್ದು ಸಮ್ಮೇಳನವನ್ನು ಭಾಷೆ ಸಮ್ಮೇಳನವೆಂದು ರಾಜ್ಯ ಸಭೆಯಲ್ಲಿ ಹೇಳಲಾಯಿತು : ಕೆಲ ಸದಸ್ಯರು ಇನ್ನೂ ಮುಂದುವರಿದು, ನೇಪಾಳದ ಸರೇಕ್ಷನ್ನು ಹುರುಪು ಸಮ್ಮೇಳನಕ್ಕೆ ಆಮಂತ್ರಿಸಬಹುದಾದರೆ, ಪಾಕಿಸ್ತಾನದ ಅಧಿಕಾರ ಅವೇತಕ್ಕೆ ಉರ್ದು ಸಮ್ಮೇಳನದಲ್ಲಿ ಭಾಗವಹಿಸಬಾರದೆಂದು ತಟ್ಟನೆ ಕೇಳಿಬಿಟ್ಟರು.

ಅಬ್ಬಾ ! ಅದೆಂತಹ ಜನವಿದ್ದಾರೆ ? ಅವರಿಗೆ ನೇಪಾಳವೂ ಪಾಕಿಸ್ತಾನವೂ ಒಂದೇ ಆಗಿದೆ ? — ಕಾಮನಾಪೆಯಾಗಿರುವವರಿಗೆ ಎಲ್ಲಾ ಹಳದಿಯಾಗಿ ಕಾಣುವುದಂತೆ ! ನೇಪಾಳ ನಮ್ಮ ಮೇಲೆ ಆಕ್ರಮಣ ನಡೆಸಿರುತ್ತದೆಯೇ ? ಪಾಕಿಸ್ತಾನ ನಮ್ಮತ್ತ ಸ್ನೇಹಹಸ್ತವನ್ನು ಚಾಚಿದೆಯೇ ? ಇದ್ದಲ್ಲಿ, ವಿದೇಶಾಂಗ ವ್ಯವಹಾರ ಕಾರ್ಯಾಲಯವನ್ನೇತಕ್ಕೆ ಮುಚ್ಚಲು ಅಜ್ಞೆಕೊಟ್ಟಿದ್ದು ? ಗಡಿಯಲ್ಲಿ ಅತಿಕ್ರಮಣಕ್ಕೆ ಎದುರಿಸುವುದು ? ಪಾಕಿಸ್ತಾನದಂತೆ ನೇಪಾಳವೂ ನಮ್ಮ ಮೇಲೆ ಆಕ್ರಮಣ ನಡೆಸೀತೆಂಬುದು ಆ ಸದಸ್ಯರ ಅಭಿಪ್ರಾಯವೇನು ? ಇಂತಹವರೂ ನಮ್ಮ ನಡುವೆ ಇದ್ದಾರೆ ! — ಶಿವಶಂಕರ

—0—

ನಿನ್ನೆ ಪತ್ರಿಕೆ ಪ್ರಕಟಣೆಗೆ ಅನಾನುಕೂಲವಾಯಿತು.



ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ


ವುಡ್‌ಲಾಂಡ್ 21-5-65 ರಿಂದ
ಶಿ ನ ಅವಿಸ್ಮರಣೀಯ ಪ್ರಾರಂಭ

ಚಿತ್ರಾಕರ್ಷಕ ಈಸ್ಟ್‌ಮನ್ ಕಲರ್ ಚಿತ್ರ ಪ್ರತಿದಿನ 3 ಪ್ರದರ್ಶನಗಳು

ಜಾನ್‌ವರ್ (ಹಿಂದಿ) Janwar

ಶಮ್ಮಿ ಕಪೂರ್, ರಾಜಶ್ರೀ ಮತ್ತಿತರ ಸುಪ್ರಸಿದ್ಧ ತಾರೆಯರು ಪಾತ್ರವಹಿಸಿರುವರು

ಸಂಗೀತ- ಶಂಕರ್ ಜೈಕಿಷನ್ ಡೈರೆಕ್ಷನ್- ಬಬ್ಬಿ ಸೋನಿಲ್

ಆಪೆರಾ 21-5-65 ರಿಂದ

ಕಾದಲಿಕ್ಕ ನೇರಮಿಲ್ಲೈ [ತಮಿಳು]

ಮನಮೋಹಕ ವರ್ಣರಂಜಿತ ಕವಿಳು ಚಿತ್ರ — ದಿನ 3 ಆಟಗಳು

SHAKTI

SUDHA

A Superb Tonic

Help The Gorakshana

★

"ಗೋರಕ್ಷಣ"ಕ್ಕೆ ಬೆಂಬಲಿಗರಾಗಿರಿ

ಶ್ರೀ ದ್ವಾರಕಾ ಜಗದ್ಗುರು ಮಹಾಸ್ವಾಮಿಗಳವರ, ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಉದಾರ ಅನುಗ್ರಹಕ್ಕೆ ಪಾತ್ರವಾಗಿದೆ

ಕನ್ನಡನಾಡಿನಲ್ಲಿ ಗೋರಕ್ಷಣೆಗೆ, ಪ್ರಾಣಿದಯೆ, ಶಾಖಾಹಾರ, ಪಶುವೈದ್ಯ ವಿಚಾರಗಳಿಂದ ತುಂಬಿದ ಏಕೈಕ ದ್ವಿಭಾಷಾ ಮಾಸಪತ್ರಿಕೆ.

ವಾರ್ಷಿಕ ಚಂದಾ 50 ಪೈಸೆ "ಗೋರಕ್ಷಣ"ಕ್ಕೆ ಲೇಖನಗಳನ್ನೂ ಪ್ರೋತ್ಸಾಹಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು.

ವಿಳಾಸ- ಗೋರಕ್ಷಣ ಆಫೀಸು ಚಾಮರಾಜಪುರಂ, ಮೈಸೂರು 4



Edited, Printed & Published by the Proprietor
Dharma Prachara Nirata M S Krishna Rao
at the Satyavani Press, Chamarajapuram Mysore 4